# ಭಯ ಮತ್ತು ಭಕ್ತಿ

'ಈ ಕಾಲದ ಹುಡುಗರಿಗೆ ಗುರು ಹಿರಿಯರ ಬಗ್ಗೆ ಭಯ ಭಕ್ತಿಯೇ ಇಲ್ಲ...' 'ಕೊಂಚವಾದರೂ ಭಯ ಭಕ್ತಿ ಇದ್ದಿದ್ದರೆ ಅವನು ಹೀಗಾಗುತ್ತಿರಲಿಲ್ಲ...' – ಇಂಥ ಮಾತುಗಳು ಹಿರಿಯರ ಬಾಯಿಯಿಂದ ಬರುತ್ತಿರುವುದನ್ನು ನಾವು ಕೇಳುತ್ತಲೇ ಇರುತ್ತೇವೆ. ಅವು ಸಾಂದರ್ಭಿಕವಾಗಿ ಹಿರಿಯರಾಡುವ ಲೋಕಾಭಿರಾಮದ ಮಾತುಗಳೇನೋ ನಿಜ. ಆದರೆ ಆ ಮಾತುಗಳಲ್ಲಿ 'ಭಕ್ತಿ'ಯ ಜೊತೆಗೆ 'ಭಯ'ವೂ ಸೇರಿರುವುದನ್ನು ಗಮನಿಸಿದಾಗ ಅಚ್ಚರಿಯಾಗುತ್ತದೆ. ಮಾನ–ಮರ್ಯಾದೆ, ಘನತೆ–ಗೌರವ, ನಾಚಿಕೆ–ಹೇಸಿಗೆ ಇತ್ಯಾದಿ ಜೋಡಿ ಪದಗಳಲ್ಲಿ ಪರಸ್ಪರ ಭಾವಮೈತ್ರಿ, ಇದೆ; ಅವುಗಳಲ್ಲಿ ಒಂದರ ಅರ್ಥ ಇನ್ನೊಂದರ ಅರ್ಥಕ್ಕೆ ಪೂರಕವಾಗಿರುತ್ತದೆ. ಆದರೆ ಭಯ– ಭಕ್ತಿ ಎಂಬ ಜೋಡಿ ಪದಗಳಲ್ಲಿ ಭಾವಮೈತ್ರಿ ಇಲ್ಲ; ಪೂರಕಾರ್ಥಗಳನ್ನು ಅವು ಒಳಗೊಂಡಿಲ್ಲ. ಭಕ್ತಿ ಎಂಬುದು ಒಂದು ಇತ್ಯಾತ್ಮಕ ಗುಣವೆನ್ನಿಸಿದರೆ, ಭಯ ನೇತ್ಯಾತ್ಮಕವಾದುದು, ಭಕ್ತಿ ಆಕರ್ಷಣೆ, ಆರಾಧನೆಗಳಿಗೆ ಕಾರಣವಾದರೆ, ಭಯ ವಿಕರ್ಷಣೆಗೆ ಕಾರಣವಾಗುವಂಥದು, ಹೀಗೆ ವಿರುದ್ಧ ದಿಕ್ಕುಗಳಿಗೆ ಮುಖ ಮಾಡಿರುವ ಈ ಎರಡು ಪದಗಳು ಜೊತೆ ಜೊತೆಯಾಗಿಯೇ ಕಾಣಿಸಿಕೊಳ್ಳಲು ಕಾರಣವಾದರೂ ಏನಿದ್ದೀತು?

ಸೂಕ್ಷ್ಮವಾಗಿ ಯೋಚಿಸಿದಾಗ ಭಕ್ತಿಯ ಹಿನ್ನೆಲೆಯಲ್ಲಿ ಭಯದ ಎಳೆಯೊಂದು ಇದ್ದೇ ಇರುವುದನ್ನು ಗಮನಿಸುತ್ತೇವೆ. ಈ ಜಗತ್ತಿನ ಸಕಲ ವ್ಯಾಪಾರಗಳ ಹಿಂದೆ ಯಾವುದೋ ಒಂದು ಮಹಾಸತ್ವ ಚಾಲಕ ಶಕ್ತಿಯಾಗಿ ಕೆಲಸ ಮಾಡುತ್ತಿದೆ ಎಂಬ ನಂಬಿಕೆ 'ದೇವರು' ಎಂಬ ಪರಿಕಲ್ಪನೆಗೆ ಬುನಾದಿಯಾಯಿತು. ದೇವರು ಸರ್ವಶಕ್ತ, ನಮಗೆ ಆತನನ್ನು ಮಣಿಸುವ ಸಾಮರ್ಥ್ಯವಿಲ್ಲ ಎಂಬ ಅರಿವಿನಿಂದ ಹುಟ್ಟಿಕೊಂಡ ದೇವರ ಕುರಿತಾದ ಭಯ ದೈವಭಕ್ತಿಯಾಗಿ ಪರಿಣಮಿಸಿತು. ದೇವರನ್ನು ನಂಬದಿದ್ದರೆ, ಆತನನ್ನು ಪೂಜಿಸದಿದ್ದರೆ ನಮಗೆ ಕೇಡುಂಟಾಗುತ್ತದೆ, ಅಥವಾ ನಮ್ಮ ಪ್ರಗತಿ ಕುಂಠಿತಗೊಳ್ಳುತ್ತದೆ ಎಂಬ ಭಯ ದೇವರ ಕುರಿತಾದ ಭಕ್ತಿಯನ್ನು ಹುಟ್ಟುಹಾಕಿತು, 'ಭಯಾದಗ್ನಿಸ್ತಪತಿ' (ಭಗವಂತನ ಭಯದಿಂದಲೇ ಬೆಂಕಿ ಉರಿಯುತ್ತದೆ) ಇತ್ಯಾದಿ ಶ್ರುತಿವಾಕ್ಯಗಳು ಸರ್ವಶಕ್ತನಾದ ದೇವರ ಹೆದರಿಕೆಯಿಂದಲೇ ಸೃಷ್ಟಿಯ ಅಸ್ತಿತ್ವ ಮುಂದುವರಿಯುತ್ತಿದೆ ಎಂಬುದನ್ನು ಸಾರಿ ಸಾರಿ ಹೇಳುವುದರ ಮೂಲಕ ಭಗವಂತನ ಕುರಿತಾದ ಭಯವನ್ನು ಹುಟ್ಟಿಸಿ, ತನ್ಮೂಲಕ ಭಕ್ತಿಯನ್ನೂ ಪೋಷಿಸುವ ಕೆಲಸ ಮಾಡಿದವು. ಭಗವಂತ ರಕ್ಷಕ, ಆತನ ಕೃಪೆಯಿಂದ ಮಾತ್ರ ನಾವು ಸುರಕ್ಷಿತವಾಗಿರಲು ಸಾಧ್ಯ ಎಂಬ ಭಾವ ಮನುಷ್ಯನಲ್ಲಿನ ಪ್ರಪತ್ತಿ ಮನೋಧರ್ಮವನ್ನು ಪ್ರಚೋದಿಸಿತು, ಒಟ್ಟಿನಲ್ಲಿ 'ಭಯವೇ ಭಕ್ತಿಯ ಮೂಲ'ವೆನ್ನುವಂತಾಗಿ 'ಭಯ–ಭಕ್ತಿ' ಎಂಬ ಜೋಡಿ ಪದಗಳ ಬಳಕೆಗೆ ಕಾರಣವಾಯಿತು, 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಪ್ರಸಿದ್ಧ ಹೇಳಿಕೆಯೂ ಇದನ್ನೇ ಸಮರ್ಥಿಸುತ್ತದೆ. ನಾವು ಧರ್ಮವನ್ನು ರಕ್ಷಿಸಿದರೆ, ಧರ್ಮವು ನಮ್ಮನ್ನು ರಕ್ಷಿಸುತ್ತದೆ– ಎಂಬುದು ಇದರ ಅರ್ಥ. ಅರ್ಥಾತ್, ನಾವು ಧರ್ಮದ ನಿಯಮಗಳನ್ನು ಪಾಲಿಸದಿದ್ದಲ್ಲಿ, ನಮ್ಮ ಕ್ಷೇಮಕ್ಕೆ ಧಕ್ಕೆ ಯುಂಟಾಗುತ್ತದೆ ಎಂಬ ಭೀತಿ ನಮ್ಮ ಧರ್ಮ ಶ್ರದ್ಧೆಯ ಹಿಂದೆ ಮಿಡಿಯುತ್ತಿರುತ್ತದೆ.

ಭಯ ಮತ್ತು ಭಕ್ತಿಗಳ ಸಾಹಚರ್ಯದ ಅರ್ಥವ್ಯಾಪ್ತಿಯನ್ನು ದೇಶಭಕ್ತಿ, ಗುರುಭಕ್ತಿ, ಪಿತೃಭಕ್ತಿ ಇತ್ಯಾದಿ ವಿವಿಧ ಭಕ್ತಿ ಪ್ರಭೇದಗಳಿಗೂ ವಿಸ್ತರಿಸಬಹುದು. ಸಮುದಾಯದ ಬೆಂಬಲವಿಲ್ಲದಿದ್ದರೆ ವ್ಯಕ್ತಿ ಸುರಕ್ಷಿತನಲ್ಲವೆಂಬ ಭಯವೇ 'ದೇಶಭಕ್ತಿ'ಯ ಮೂಲವೆನ್ನಬಹುದು. ಇನ್ನು ಗುರುಭಕ್ತಿಯ ವಿಚಾರ ಪ್ರತ್ಯೇಕವಾಗಿ ಹೇಳಬೇಕಾಗಿಯೇ ಇಲ್ಲ. ತಾನು ತನ್ನ ಗುರುವಿನ ನಿರೀಕ್ಷೆಗಳಿಗೆ ಸರಿಯಾಗಿ ನಡೆದುಕೊಳ್ಳದಿದ್ದರೆ ತನಗೆ ದೈಹಿಕವಾಗಿಯೋ ಮಾನಸಿಕವಾಗಿಯೋ ಶಿಕ್ಷೆ ಕಾದಿರುತ್ತದೆ ಎಂಬ ಭಯವೇ 'ಗುರುಭಕ್ತಿ'ಯ ಹಿನ್ನೆಲೆಯಲ್ಲಿದೆ. ಇದೇ ವಾದವನ್ನು ಪಿತೃಭಕ್ತಿಗೂ ಅನ್ವಯಿಸಬಹುದು. ಇನ್ನು ಕಾನೂನಿನ ಕುರಿತಾದ ಭಯ ಸನ್ನಡತೆ, ಶಿಸ್ತು ಇತ್ಯಾದಿಗಳ ಬಗೆಗೆ ಜನರನ್ನು ಒತ್ತಾಯಿಸುತ್ತದೆ. ಕಾನೂನು ಕಟ್ಟಳೆಗಳ ಬಗೆಗೆ ಭಯವೇ ಇಲ್ಲದಿದ್ದಲ್ಲಿ ಸಮಾಜದಲ್ಲಿ ಅರಾಜಕತೆ, ಸ್ವೇಚ್ಛಾಪ್ರವೃತ್ತಿ ಉಲ್ಬಣಿಸುತ್ತದೆ.

ಹೀಗಾಗಿ ಭಕ್ತಿಯ ನೆಲೆಗಟ್ಟಾಗಿರುವ ಭಯ ವಾಸ್ತವವಾಗಿ ಅಪೇಕ್ಷಣೀಯವೇ. ನಮ್ಮ ಬದುಕಿನುದ್ದಕ್ಕೂ ಭಯದ ಶ್ರುತಿ ಮಿಡಿಯುತ್ತಿರುವುದರಿಂದಲೇ ನಮ್ಮ ಜೀವನ ಪ್ರೀತಿ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಅದಕ್ಕಾಗಿಯೇ ತಿಳಿದವರು 'ಭಯ ಎಂದರೆ ಭವ' ಎಂದು ಹೇಳಿದರು. ನಮ್ಮ ಭವಜೀವನ ಸಹ್ಯವಾಗಿರಬೇಕಾದರೆ ಭಯನಿವಾರಕನಾದ ಭಗವಂತನ ಕೃಪೆ ಬೇಕು ಎಂದು 'ಭವಿ'ಗಳು ಭಾವಿಸುವುದು ತೀರಾ ಸಹಜವಷ್ಟೇ? ಕೋತಿಯ ಮರಿ ತಾನು ಆಧಾರ ತಪ್ಪಿ ಕೆಳಕ್ಕೆ ಬೀಳುತ್ತೇನೆಂಬ ಭಯದಿಂದ ತಾಯಿಯನ್ನು ಬಿಗಿಯಾಗಿ ತಬ್ಬಿಕೊಂಡಿರುತ್ತದೆ. ಇದನ್ನೇ ಮನುಷ್ಯನ ಪ್ರಪತ್ತಿಯನ್ನು ಸೂಚಿಸುವ 'ಮರ್ಕಟ ಕಿಶೋರ ನ್ಯಾಯ' ಎನ್ನುತ್ತಾರೆ. ಭಯ ಮತ್ತು ಭಕ್ತಿ ಸದಾ ಜೊತೆಯಾಗಿಯೇ ಇರುವುದಕ್ಕೆ ಮನುಷ್ಯನ ಜೀವನ ಪ್ರೀತಿಯೇ ಕಾರಣ ವಿದ್ದೀತಲ್ಲವೆ?

■ ವೈನತೇಯ

## ಮಾತೇ ಮುತ್ತು

★ ಶತಮೂರ್ಖ ಕೂಡಾ ತನ್ನ ಹೃದಯಕ್ಕೆ ಹತ್ತಿರವಾದ ಕೆಲಸವನ್ನು ಸಾಧಿಸಬಲ್ಲ. ಆದರೆ ಮಾಡುವ ಕೆಲಸವನ್ನು ತನ್ನ ಅಭಿರುಚಿಗೆ ತಕ್ಕಂತೆ ರೂಪಿಸುವವನು ಮಾತ್ರ ಬುದ್ಧಿವಂತ.

–ಸ್ವಾಮಿ ವಿವೇಕಾನಂದ

★ ಜೀವನದಲ್ಲಿ ಎದುರಿಸಿದ ಎಲ್ಲ ಕಷ್ಟಗಳು ನನ್ನನ್ನು ಇನ್ನಷ್ಟು ಗಟ್ಟಿಗೊಳಿಸಿದವು. ಕಷ್ಟಗಳು ಬಂದಾಗ ನಿಮಗೆ ಅದು ಗೊತ್ತಾಗದಿರಬಹುದು; ಆದರೆ ಮುಸುಡಿಗೆ ಎರಡೇಟು ಬಿದ್ದರೆ ಜೀವನದಲ್ಲಿ ನಿಮಗೆ ಅದರಿಂದ ಒಳ್ಳೆಯದೇ ಆಗುತ್ತದೆ.

–ವಾಲ್ಟ್ ಡಿಸ್ನಿ

★ ನಮ್ಮೊಳಗಿನ ಕ್ರೌರ್ಯ ಮಣಿಯುವವರೆಗೂ ನಮಗೆ ಯುದ್ಧ ಮತ್ತು ಸೈನಿಕರ ಅಗತ್ಯವಿರುತ್ತದೆ.

–ಡಾ.ಸರ್ವಪಲ್ಲಿ ರಾಧಾಕೃಷ್ಣನ್

★ ಸರಿಯಾದದ್ದನ್ನು ಮಾಡುವವರಿಗೆ ಎಲ್ಲ ಕಾಲವೂ ಸಕಾಲವೇ.

–ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ನಿಮ್ಮ ಅಸುರಕ್ಷಿತ ಆಲೋಚನೆಗಳು ನಿಮಗೆ ಹಾನಿ ಮಾಡಿದಷ್ಟು ಬದ್ಧ ವೈರಿಯೂ ಮಾಡಲಾರ.

–ಗೌತಮ ಬುದ್ಧ

★ ನಗು ಇಲ್ಲದ ಒಂದು ದಿನ ನಿಜಕ್ಕೂ ವ್ಯರ್ಥವಾದಂತೆ.

–ಚಾರ್ಲಿ ಚಾಪ್ಲಿನ್

★ ಜೀವನದಲ್ಲಿ ನಿಮಗೆ ಏನು ಸಿಕ್ಕಿದೆ ಎನ್ನುವುದನ್ನು ಅವಲೋಕಿಸಿದರೆ ಇನ್ನಷ್ಟು ಸಿಗುತ್ತದೆ. ನಿಮಗೆ ಏನು ಸಿಕ್ಕಿಲ್ಲ ಎನ್ನುವುದಷ್ಟನ್ನೆ ನೋಡಿದರೆ ಇನ್ನೇನೂ ಸಿಗುವುದಿಲ್ಲ.

–ಓಪ್ರಾ ವಿನ್‌ಫ್ರೇ

★ ನಿಮ್ಮೆಲ್ಲ ಶಕ್ತಿಯತ್ತ ಗಮನ ಹರಿಸುವುದೇ ಬದಲಾವಣೆಯ ರಹಸ್ಯ. ಹಳೆಯದರ ವಿರುದ್ಧ ಹೋರಾಡುವುದಲ್ಲ; ಹೊಸದನ್ನು ಕಟ್ಟುವುದು ಬದಲಾವಣೆ.

–ಸಾಕ್ರೆಟಿಸ್

★ ಧ್ವನಿಯಿಲ್ಲದವರು ಎನ್ನುವ ವರ್ಗ ಖಂಡಿತ ಇಲ್ಲ. ಉದ್ದೇಶಪೂರ್ವಕವಾಗಿ ದಮನಿಸಲ್ಪಟ್ಟ ಧ್ವನಿಯವರು ಮತ್ತು ಗಟ್ಟಿಯಾಗಿ ಕೇಳಿಸದ ಧ್ವನಿಯವರಷ್ಟೇ ಇದ್ದಾರೆ.

–ಅರುಂಧತಿ ರಾಯ್

★ ನನ್ನ ಮೆದುಳು ಮತ್ತು ಹೃದಯವೇ ನನ್ನ ದೇವಾಲಯ. ಕರುಣೆಯೇ ನನ್ನ ತತ್ವಜ್ಞಾನ.

–ದಲೈಲಾಮಾ

★ ಭೂಮಿಯನ್ನು ನಾಶಗೊಳಿಸುವ ಯಾವುದೂ ಬಂಡವಾಳ ಹೂಡಿಕೆ ಅಲ್ಲ.

–ವಂದನಾ ಶಿವ

★ ಮಕ್ಕಳ ಮುಂದೆ ಮಂಡಿಯೂರದ ದೊಡ್ಡತನದಿಂದ ನನ್ನನ್ನು ದೂರವಿರಿಸು.

–ಖಲೀಲ್ ಗಿಬ್ರಾನ್

★ ಹುಟ್ಟು ಜಗತ್ತಿನಲ್ಲಿ ಹುಚ್ಚರು ಮಾತ್ರ ಸ್ವಸ್ಥ ಮನಸ್ಸಿನವರು.

–ಅಕಿರಾ ಕುರಸೋವ